ನಿಧಾನವಾಗಿ, ನಿಜವಾಗಿಯೂ ಸನ್ಮತಿ ಮತ್ತು ಅವಳ ಗಂಡ ಮುರಲಿಯ ನಡುವೆ ಸಾಮರಸ್ಯವಿಲ್ಲ, ದಿನಕ್ಕೊಂದು ಬಾರಿಯಾದರೂ ಜಗಳ ಆಗುತ್ತಿರುತ್ತದೆ ಎಂಬ ವಿಚಾರ ಸನ್ಮತಿಯ ನೋವು ತುಂಬಿದ ಮಾತಿನಿಂದ ಶಾಲ್ಮಲಿಗೆ ತಿಳಿಯಿತು. ಆದರೆ ಅವರಿವರು ಹೇಳಿದ್ದನ್ನು ಅವಳು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ಸನ್ಮತಿ ಕಷ್ಟಗಳನ್ನು ಹೇಳಿಕೊಂಡಾಗ ಮೊದಮೊದಲು ಆಲಿಸುತ್ತಿದ್ದ ಶಾಲ್ಮಲಿ ಕ್ರಮೇಣ, ಪ್ರತಿಕ್ರಿಯಿಸದೆ ಸುಮ್ಮನಿರಲು ಅಭ್ಯಾಸ ಮಾಡಿಕೊಂಡಳು.

7

ಅಮೇರಿಕೆಯಲ್ಲಿ ಕಾಲ ಬಹಳ ನಿಧಾನವಾಗಿ ಸಾಗುತ್ತಿರುವಂತೆ ಭಾಸವಾಗುತ್ತಿತ್ತು ನರಹರಿಗೆ. ಅದಕ್ಕೆ ಏನು ಕಾರಣ ಎಂದು ಕೂಡ ಅವನಿಗೆ ಗೊತ್ತಿತ್ತು. ದೊಡ್ಡ ಸಂಬಳವೇನೋ ಕೈಗೆ ಬರುತ್ತಿತ್ತು. ಆದರೆ ಮನಸ್ಸು ಆಗಾಗ ಭಾರತವನ್ನು ಬಯಸುತ್ತಿತ್ತು. ಮೊದಮೊದಲು ಪ್ರಿಯವಾಗಿದ್ದ ಅಮೇರಿಕ ಕ್ರಮೇಣ ಇದು ತನಗೆ ಒಗ್ಗುತ್ತಿರುವ ನೆಲವಲ್ಲ ಎನಿಸತೊಡಗಿತು. ಬದುಕಿನ ಚಲನೆ ಗಾಣದೆತ್ತಿನ ನಡೆಯಂತಿದೆ ಎಂದು ಅನಿಸತೊಡಗಿತು.

ಅಂತೂ ಇಂತೂ ಕಾಲ ಮುಂದು ಮುಂದಕ್ಕೆ ಸಾಗಿತು. ವರ್ಷ ಐವತ್ತು ದಾಟಿದಾಗ ಇನ್ನು ಇಲ್ಲಿರುವುದು ಬೇಡ, ಭಾರತಕ್ಕೆ ಹೋಗಿಬಿಡೋಣ ಎಂದು ನಿರ್ಧರಿಸಿದ. ಸಾಕಷ್ಟು ಸಂಪಾದನೆಯನ್ನೂ ನರಹರಿ ಮಾಡಿದ್ದ. ನೆಮ್ಮದಿಯಿಂದ ಬದುಕಲು ಇಷ್ಟು ಸಾಕು ಎಂದೆನಿಸತೊಡಗಿತ್ತು. ಆದರೆ ಯಾವುದೇ ಪೂರ್ವ ತಯಾರಿ ಮಾಡದೆ ಹೋಗುವುದು ಹೇಗೆ, ಎಲ್ಲಿ ವಾಸ, ಹೆಂಡತಿ ಮಕ್ಕಳ ಅಭಿಪ್ರಾಯ ಏನು ಎಂದು ವಿಚಾರಿಸಬೇಕಲ್ಲ ಎಂಬೆಲ್ಲ ಯೋಚನೆಗಳು ಬಂದವು.

ಕೊನೆಗೆ ನರಹರಿ ತೀರ್ಮಾನಿಸಿದ– ಭಾರತಕ್ಕೆ ಹೋಗಿ ಮನೆ ಕಟ್ಟಿ ವಾಸಿಸುವ ಜಾಗ ಗುರುತಿಸಿ ಬರಬೇಕು ಎಂದುಕೊಂಡ. ಒಂದು ದೊಡ್ಡ ಮನೆಯನ್ನೇ ಕಟ್ಟಿಸುವುದು, ಮಹಡಿಯೂ ಇದ್ದರೆ, ಶಾಲ್ಮಲಿ, ಅಭಿ ಮತ್ತು ಸುಕೃತಿಗೆ ಇಷ್ಟವಾಗಬಹುದು ಎಂದೆಲ್ಲ ಯೋಚಿಸಿದ.

ಒಂದು ದಿನ ಶಾಲ್ಮಲಿ, ಅಭಿ ಮತ್ತು ಸುಕೃತಿ ಒಟ್ಟಿಗೆ ಇರುವಾಗ ನರಹರಿ ತನ್ನ ಮನಸ್ಸಿನಲ್ಲಿರುವುದನ್ನೆಲ್ಲ ಹೇಳಿ, ಭಾರತಕ್ಕೆ ಹೋಗಿ ಒಂದು ಮನೆ ಕಟ್ಟಿಕೊಳ್ಳಲು ಮಾತ್ರವಲ್ಲ, ಒಂದು ತೋಟ ಮಾಡಿಕೊಳ್ಳಲು ಕೂಡ ಅವಕಾಶವಿರುವಂಥ ಜಾಗವನ್ನೇ ಪತ್ತೆ ಮಾಡುತ್ತೇನೆ, ಗ್ರಾಮೀಣ ಪ್ರದೇಶವಾಗಿದ್ದರೆ ಚೆನ್ನ ಎಂದು ಹೇಳಿದ.

ತಡ ಮಾಡದೆ ನರಹರಿ ಭಾರತಕ್ಕೆ ಹೊರಡಲು ಸಿದ್ಧನಾದ. ಗಂಡನ ಯಾವ ನಿರ್ಧಾರಕ್ಕೂ ವಿರೋಧ ವ್ಯಕ್ತಪಡಿಸಿದವಳಲ್ಲ ಶಾಲ್ಮಲಿ. ಎಲ್ಲದಕ್ಕೂ ಅವಳ ಮೌನ ಮತ್ತು ಪ್ರಸನ್ನತೆಯೇ ಅನುಮೋದನೆಯಾಗಿತ್ತು. ಅಭಿ ಮತ್ತು ಸುಕೃತಿ ಇಬ್ಬರೂ ಇಲೆಕ್ಟ್ರಾನಿಕ್ ಎಂಜಿನಿಯರಾಗಿದ್ದು ಒಳ್ಳೆಯ ಸಂಬಳ ಪಡೆಯುತ್ತಿದ್ದರು. ಆದರೆ ತಾನು ಸಾಕಷ್ಟು ಸಂಪಾದನೆ ಮಾಡಿಕೊಂಡ ಬಳಿಕವೇ ಅಮೇರಿಕೆಯಿಂದ ಹೊರಡುವುದು ಎಂದ ಅಭಿ. ಸುಕೃತಿ ಕೂಡ ಅಣ್ಣನ ಅಭಿಪ್ರಾಯವನ್ನೇ ವ್ಯಕ್ತಪಡಿಸಿದಳು.

ಮಕ್ಕಳನ್ನು ಬಿಟ್ಟಿರುವುದು ನರಹರಿಗೆ ಪ್ರಿಯವಾದ ವಿಚಾರವಾಗಿರಲಿಲ್ಲ. ನರಹರಿ ತನ್ನ ಹೆಂಡತಿ ಮತ್ತು ಮಕ್ಕಳನ್ನು ಅಪಾರವಾಗಿ ಪ್ರೀತಿಸುತ್ತಿದ್ದ. ಬದುಕಿನ ನಿಜವಾದ ಸಂತೋಷ ಇರುವುದು ತಾಯಿ ತಂದೆ ಮತ್ತು ಮಕ್ಕಳು ಕೇವಲ ಹಣ ಸಂಪಾದನೆಗಾಗಿ ಜಗತ್ತಿನ ಯಾವ್ಯಾವುದೋ ಮೂಲೆಯಲ್ಲಿ ಇದ್ದುಕೊಂಡು ಬದುಕುವುದರಲ್ಲಿ ಅಲ್ಲ, ಒಂದು ಕಡೆ ಒಟ್ಟಿಗಿದ್ದು ಬದುಕುವುದರಲ್ಲಿರುವುದು ನಿಜವಾದ ಸಂತೋಷ ಎಂಬುದು ಅವನ ನಂಬಿಕೆಯಾಗಿತ್ತು. ಅಷ್ಟೇ ಅಲ್ಲ, ಅದು ಅವನ ಕನಸು ಕೂಡ ಆಗಿತ್ತು. ನರಹರಿಯ ಹೃದಯ ಪ್ರೀತಿಯ ಸಾಗರ ಎನ್ನುವುದು ಶಾಲ್ಮಲಿ, ಅಭಿ ಮತ್ತು ಸುಕೃತಿ ಎಂದೋ ತಿಳಿದಿದ್ದರು. ಆದರೆ ಈಗ ಅಭಿ ಮತ್ತು ಸುಕೃತಿಯ ಮನಸ್ಸಿನಲ್ಲಿ 'ನಮ್ಮ ಬದುಕು ನಮ್ಮ ಬದುಕೇ ಆಗಿರಬೇಕು' ಎಂಬ ಭಾವ ಬಲವಾಗಿ ಬೇರೂರಿತ್ತು. ಅಪ್ಪನ ಸಂಪಾದನೆಯಲ್ಲಿ ಬದುಕುವುದು ಬೇಡ, ನಮ್ಮ ಬದುಕಿಗೆ ಬೇಕಾದ್ದನ್ನು ನಾವೇ ಸಂಪಾದಿಸಬೇಕು, ನಾವು ನಮ್ಮ ಸ್ವಂತ ಮನೆಯನ್ನು ಕಟ್ಟಿಕೊಳ್ಳಬೇಕು ಎಂದು ಅಭಿ ಮತ್ತು ಸುಕೃತಿ ಮಾತಾಡಿಕೊಳ್ಳುತ್ತಿದ್ದರು. ಆದರೆ ಹಾಗೆಂದು ಅಪ್ಪನೊಡನೆ ಹೇಳುವುದು ಹೇಗೆ ಎಂಬ ಚಿಂತೆ ಅವರದಾಗಿತ್ತು. ಪ್ರೀತಿಯ ಸಾಗರವಾಗಿದ್ದ ಅಪ್ಪನ ಮನಸ್ಸಿಗೆ ನೋವಾಗುವಂಥ ಯಾವುದೇ ವಿಚಾರವನ್ನು ಎತ್ತಲು ಅವರಿಂದ ಸಾಧ್ಯವಿರಲಿಲ್ಲ. ತನ್ನದು ಪ್ರೀತಿಯಲ್ಲ ಮೋಹ ಎಂದು ನರಹರಿಗೆ ಒಮ್ಮೊಮ್ಮೆ ಅನಿಸುತ್ತಿದ್ದರೂ ಅದರಿಂದ ಕಳಚಿಕೊಳ್ಳಲು ನರಹರಿಯಿಂದ ಸಾಧ್ಯವೇ ಇರಲಿಲ್ಲ.

ಹೆಂಡತಿ ಮತ್ತು ಮಕ್ಕಳ ಮೇಲೆ ಎಷ್ಟು ಪ್ರೀತಿಯಿದ್ದರೂ ಅವರ ಮೇಲೆ ತನ್ನ ನಿರ್ಧಾರವನ್ನು ಹೇರುವವನಲ್ಲ ನರಹರಿ. ಸ್ವಭಾವ ಸಹಜವಾದ ಮೃದುವಾದ ಮಾತಿನಲ್ಲಿ ನರಹರಿ ಹೇಳಿದ, 'ನಾನು ಇಷ್ಟರಲ್ಲೇ ಸಂಪಾದಿಸಿರುವ ಹಣ ನಮ್ಮ ಬದುಕಿಗೆ ಧಾರಾಳ ಸಾಕು. ಅಭಿ ಮತ್ತು ಸುಕೃತಿ ಭಾರತದಲ್ಲಿ ಉದ್ಯೋಗ ಪಡೆದುಕೊಂಡು ಇಲ್ಲಿ ಪಡೆಯುವಷ್ಟೇ ವರಮಾನ ಅಲ್ಲಿಯೂ ಪಡೆಯಬಹುದು. ಇಲ್ಲಿನ ಡಾಲರ್ ಮೌಲ್ಯಕ್ಕೆ ಹೋಲಿಸಿದಾಗ ಅಷ್ಟು ಸಿಗಲಾರದು ಎಂಬ ಭಾವನೆ ಬರುವುದು ಸ್ವಾಭಾವಿಕವೇ ಆಗಿದೆ. ಆದರೆ ಭಾರತದಲ್ಲೇ ಇದ್ದು, ಸಿರಿತನದಲ್ಲಿ ಬದುಕುವವರಾಗಲಿ, ಬಡತನದಲ್ಲಿ ಬದುಕುವವರಾಗಲಿ, ತಮ್ಮ ಗಳಿಕೆಯ ಮೌಲ್ಯವನ್ನು ಇನ್ನೊಂದು ದೇಶದ ನಾಣ್ಯದ ಮೌಲ್ಯದ ಜೊತೆ ಹೋಲಿಸುತ್ತಾ ಬದುಕುವುದಿಲ್ಲ. ಅನ್ಯದೇಶದಿಂದ ಬಂದು ಇಲ್ಲಿ ದುಡಿಯುವವರು ಮಾತ್ರ ಯಾವುದೋ ಒಂದು ಬಗೆಯ ಭಾವನಾತ್ಮಕ ಸಮಾಧಾನಕ್ಕಾಗಿ ಅಂಥ ಹೋಲಿಕೆ ಮಾಡುತ್ತಿರುತ್ತಾರೆ. ಆದರೆ ಅಮೇರಿಕೆಯಲ್ಲಿ ನಾನು ಇದುವರೆಗೆ ಕಂಡಂತೆ, ಯಾವ ಭಾರತೀಯನೂ ಈ ದೇಶವನ್ನು ತನ್ನ ಹುಟ್ಟುನೆಲವನ್ನು ಪ್ರೀತಿಸುವಂತೆ ಪ್ರೀತಿಸುವುದಿಲ್ಲ. ಸಂಪಾದನೆಯನ್ನು ಎಣಿಸುವುದರಾಚೆ ಇಲ್ಲಿ ಯಾರಿಗೂ ಶಾಂತಿ ಸಮಾಧಾನ ತೃಪ್ತಿ ಸಿಗುವುದಿಲ್ಲ. ನಮ್ಮ ದೇಶದಲ್ಲಿ, ಅಲ್ಲಿನ ಸಾಮಾಜಿಕ ಸಾಂಸ್ಕೃತಿಕ ಪರಿಸರದಲ್ಲಿ ನಮಗೆ ದೊರೆಯುವ ಭಾವನಾತ್ಮಕ ಸಮಾಧಾನ ಮತ್ತು ಸಂತೋಷ ಇಲ್ಲಿ ದೊರೆಯುವುದಿಲ್ಲ'.

ಸುಕೃತಿಯ ಮುಖದಲ್ಲಿ ಮೂಡಿದ ಕ್ಷೀಣವಾದ ಮುಗುಳುನಗೆಗೆ ಏನೋ ಬೇರೆ ಅರ್ಥವಿದೆ ಎಂದು ನರಹರಿಗನಿಸಿತು. ಸುಕೃತಿ ಅಣ್ಣನ ಮುಖ ನೋಡಿದಳು. ಅವನು ಗಂಭೀರವಾಗಿದ್ದ. ಅದು ಗಾಂಭೀರ್ಯಕ್ಕಿಂತಲೂ ನಿರ್ಲಿಪ್ತತೆಯನ್ನು ಸೂಚಿಸುವಂತಿತ್ತು. ಆದರೂ ಅವರ ಮನಸ್ಸಿನಲ್ಲಿ ಏನಿದೆ ಎಂದು ನರಹರಿ ಸುಮಾರಾಗಿ ಅರ್ಥ ಮಾಡಿಕೊಂಡ. ಇಲ್ಲಿ ಕೂಡ ಹೆಂಡತಿ ಮಕ್ಕಳ ಜೊತೆಗೆ ಸಂತೋಷ ಸಾಮಾಧಾನದಿಂದ ಬದುಕುತ್ತಾ, 'ಇದು ಕೂಡ ನಮ್ಮ ದೇಶವೇ, ದೇಶ ಯಾವುದಾದರೇನು, ಚೆನ್ನಾಗಿ ಬದುಕುವುದು ಮಾತ್ರ ಮುಖ್ಯ ಎಂದುಕೊಂಡು ಬದುಕುವವರು ಇಲ್ಲಿ ಇಲ್ಲವೆ?' ಎಂಬ ಪ್ರಶ್ನೆ ಸುಕೃತಿಯ ಮನಸ್ಸಿನಲ್ಲಿ ಇರಬಹುದು ಎಂದೆನಿಸಿತು ನರಹರಿಗೆ. ಯಾರೇ ಆಗಿರಲಿ, ಅವರ ಮನಸ್ಸನ್ನು ಅರ್ಥ ಮಾಡಿಕೊಂಡರೆ ಸಾಕು, ಏನು ಅರ್ಥವಾಯಿತು ಎಂದು ಅವರಿಗೂ ಹೇಳಬಾರದು, ಇನ್ನೊಬ್ಬರಿಗೂ ಹೇಳಬಾರದು ಎಂಬ ಧೋರಣೆಯಿರಿಸಿಕೊಂಡಿದ್ದ ನರಹರಿ, ಅಭಿ ಮತ್ತು ಸುಕೃತಿ ಏನೂ ಮಾತಾಡದಿರುವುದನ್ನು ಕಂಡು ತನ್ನ ಎಂದಿನ ಮೃದು ದನಿಯಲ್ಲಿ, 'ನಾನು ಭಾರತಕ್ಕೆ ಹೋಗಿ ಸ್ವಲ್ಪ ಸಮಯದ ನಂತರ ಬರುತ್ತೇನೆ. ಇಷ್ಟು ದಿನ ಸದಾ ಕಾಲ ಇಲ್ಲಿ ನನ್ನನ್ನು ನೋಡುತ್ತಾ ಇದ್ದಿರಿ. ನಾನಿಲ್ಲದಿರುವಾಗ ನಿಮಗೆ ಏನೇನು ಯೋಚನೆಗಳು ಬರಬಹುದು ಎಂಬ ಕುತೂಹಲ ಕೂಡ ನನಗಿದೆ' ಎಂದು ಹೇಳಿ ಮುಗುಳ್ನಕ್ಕ. ಅಪ್ಪನ ಅಪರೂಪದ ಮುಗುಳುನಗೆಯಾಗಿತ್ತದು.

ಆ ಮುಗುಳುನಗೆಯ ಅರ್ಥ ಏನಾಗಿರಬಹುದು, ಅದು ಅಪ್ಪ ನಮಗೆ ಪ್ರೀತಿಯಿಂದಲೇ ಒಡ್ಡಿದ ಒಂದು ಸವಾಲಾಗಿರಬಹುದೆ ಎಂದು ಅಭಿ ಮತ್ತು ಸುಕೃತಿ ಇಬ್ಬರೂ ಯೋಚಿಸಿದರು. ಅಥವಾ ನಾನು ಇಲ್ಲಿ ಇಲ್ಲದಿರುವಾಗ ನಾನು ಮಾಡುತ್ತಿರುವ ಹಲವು ಬಗೆ ಕೆಲಸಗಳನ್ನು ನೀವು ಮೂವರೂ ಹೇಗೆ ನಿಭಾಯಿಸುತ್ತೀರಿ? ಎಂಬುದು ಅಪ್ಪನ ಮುಗುಳನಗೆಯ ಅರ್ಥವಾಗಿರಬಹುದೆ? ಎಂದು ಚಿಂತಿಸಿದರು.

ಕನಿಷ್ಠ ಮೂರು ತಿಂಗಳು ನಾನು ಭಾರತದಲ್ಲಿ ಇರುತ್ತೇನೆ; ಒಂದೇ ಕಡೆ ಇರುವುದಿಲ್ಲ, ಸಂಚರಿಸುತ್ತಾ ಇರುತ್ತೇನೆ. ಆದರೆ ನಿಮ್ಮ ಜೊತೆ ಸಂಪರ್ಕದಲ್ಲಿ ಇರುತ್ತೇನೆ' ಎಂದ ನರಹರಿ.

ನರಹರಿ ಭಾರತಕ್ಕೆ ಹೊರಡುವ ದಿನ ಅವರ ಮನೆಗೆ ಬಂದ ಸನ್ಮತಿ, ನರಹರಿಯೊಡನೆ, 'ಏನೂ ಚಿಂತಿಸಬೇಡಿ, ನಾನಿದ್ದೇನೆ, ಮುರಲಿ ಇದ್ದಾನೆ. ಎಲ್ಲಾ ನಾವು ನೋಡಿಕೊಳ್ಳುತ್ತೇವೆ. ಶಾಲ್ಮಲಿಯಕ್ಕ, ಅಭಿ ಮತ್ತು ಸುಕೃತಿ ಯಾರಾದರೊಬ್ಬರು ಒಂದು ಕಾಲ್ ಮಾಡಿದರೆ ಸಾಕು ನಾವು ಇಲ್ಲಿದ್ದರೂ ಕೂಡಲೇ ಬರುತ್ತೇವೆ' ಎಂದಳು.

ಒಂದು ದಿನ ಸುಕೃತಿ ಅಣ್ಣನ ಬಳಿ, 'ಈಕೆ ಯಾಕೆ ನಮ್ಮ ಮೇಲ್ವಿಚಾರಿಕೆ